ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ,
ಚನ್ನರಾಯಪಟ್ಟಣ

ಸಿ ಸಿ ನಂಃ **282/2024**

ದಿನಾಂಕ **21.04.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

ಪಾಟಿ ಸವಾಲು ಆರೋಪಿತರ ಪರ ವಕೀಲರಿಂದಃ

ನನ್ನ ಪತಿಯವರು ಎಷ್ಟು ಖಾತೆಯನ್ನು ಯಾವ ಯಾವ ಬ್ಯಾಂಕಿನಲ್ಲಿ ಹೊಂದಿದ್ದರು ಎಂದು ನನಗೆ ಹೇಳಲು ಸಾಧ್ಯವಿಲ್ಲ. ನಿಪಿ 12 ರಲ್ಲಿರುವ ಸಹಿ ನನ್ನ ಪತಿಯವರದು. ನ್ಯಾಯಾಲಯಕ್ಕೆ ಅದರ ಬಗ್ಗೆ ಹೇಳಿದಾದ್ದಲ್ಲಿ ನಿಜಾಂಶ ಗೊತ್ತಾಗುತ್ತದೆ ಎಂದು ಉದ್ದೇಶಪೂರ್ವಕವಾಗಿ ಗೊತ್ತಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 12 ಕ್ರಯಪತ್ರ ಆಗುವಾಗ ಹಣವನ್ನು ಚೆಕ್ ಮೂಲಕ ಕೊಡಲಾಗಿರುತ್ತದೆ ಎಂದು ನಮೂದು ಮಾಡಲಾಗಿರುತ್ತದೆ ಎಂದರೆ ಸರಿ. ನನ್ನ ಪತಿಯವರು ಹಣವನ್ನು ಪಡೆದುಕೊಂಡು ಅಕ್ರಮವಾಗಿ ಆರೋಪಿಯಿಂದ ಹಣವನ್ನು ಪಡೆದುಕೊಳ್ಳುವ ಉದ್ದೇಶದಿಂದ ಈ ಕೇಸನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಚೆಕ್ ಅನ್ನು ಚಂದ್ರೇಗೌಡರ ಮನೆಯಲ್ಲೆಕೊಟ್ಟಿರುತ್ತಾರೆ ನನ್ನ ಪತಿಯವರು ಅವರ ಮನೆಗೆ ಹೋಗಿರುತ್ತಾರೆ. ಚೆಕ್ ನ ವಿಚಾರ ನನಗೆ ಗೊತ್ತಿತ್ತಾ ಎಂದರೆ ನಾನು ಅಲ್ಲಿ ಹಾಜರಿರುವುದಿಲ್ಲ. ಆದರೆ ಅವರು ಚೆಕ್ ಯಾವ ಉದ್ದೇಶಕ್ಕಾಗಿ ಕೊಟ್ಟಿದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಚೆಕ್ ಅನ್ನು ಪಡೆದುಕೊಳ್ಳುವ ಸಮಯದಲ್ಲಿ ಯಾರು ಯಾರು ಹೋಗಿರುತ್ತಾರೆ ಎಂದು ಗೊತ್ತಿಲ್ಲ. ಚೆಕ್ಕನ್ನು ಆರೋಪಿಯೇ ಬರೆದುಕೊಟ್ಟಿರುತ್ತಾರೆ ಎಂದು ನನ್ನ ಪತಿಯವರೇ ತಿಳಿಸಿರುತ್ತಾರೆ. ಚೆಕ್ ನಲ್ಲಿರುವ ಬರವಣಿಗೆ ಸಹಿ ವ್ಯತ್ಯಾಸ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟಿ ಸವಾಲಿಗೆ ಕಾಲವಾಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.